# ಮಾಹಿತಿ ಹಕ್ಕು ಅಧಿನಿಯಮ 2005

## 1) ಸಂಸ್ಥೆಯ ವಿವರಗಳು ಕಾರ್ಯ ವ್ಯಾಪ್ತಿ ಮತ್ತು ಕರ್ತವ್ಯಗಳು (ಕಲಂ 4(1) (ಬಿ) (i) ಮಾಹಿತಿ ಹಕ್ಕು ಅಧಿನಿಯಮ 2005)

ಕಿಲ್ಟ್ ಸಂಸ್ಥೆಯು ಸಂಘ ಸಂಸ್ಥೆಗಳ ನಿಯಮದಡಿಯಲ್ಲಿ ನೊಂದಯಿಸಿರುವ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದೆ.

- ಕಿಲ್ಟ್ ಸಂಸ್ಥೆಯು 1983–84 ಪ್ರಾರಂಭವಾಗಿದೆ.
- 1995–96 ರ ಸಾಲಿನಲ್ಲಿ ಕಿಲ್ಟ್ ಸಂಸ್ಥೆಯನ್ನು ಸಂಘ ಸಂಸ್ಥೆಗಳು ಅಧಿನಿಯಮದಡಿಯಲ್ಲಿ ನೊಂದಯಿಸಿದ್ದು AICTE, DTE, CLRI ಸಂಸ್ಥೆಗಳು ಅನುಮೋದಿಸಿದೆ. ಈ ಸಂಸ್ಥೆಯನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಪ್ರೋತ್ಸಾಹಿಸಿದ್ದು ಡಿಪ್ಲೋಮ ಇನ್ ಲೆದರ್ ಟೆಕ್ನಾಲಜಿ ಕೋರ್ಸ್‌ಗಳನ್ನು ಪ್ರಾರಂಭಿಸಿದೆ.
- ಮಾನ್ಯ ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆರವರು ಸಂಸ್ಥೆಯ ಅಧ್ಯಕ್ಷರಾಗಿದ್ದು, ಈ ಕೆಳಕಂಡವರು ಮಂಡಳಿಯ ನಿರ್ದೇಶಕರಾಗಿರುತ್ತಾರೆ.
  - ಉಪಕಾರ್ಯದರ್ಶಿ (ಬಿ & ಆರ್) ಆರ್ಥಿಕ ಇಲಾಖೆ
  - ಹೆಚ್ಚುವರಿ ನಿರ್ದೇಶಕರು (ಜಿಕೈಕೆ) ಕೇಂದ್ರ ಕಛೇರಿ
  - ನಿರ್ದೇಶಕರು (ತಾಂತ್ರಿಕ ಶಿಕ್ಷಣ ಇಲಾಖೆ)
  - ನಿರ್ದೇಶಕರು (ಸೆಂಟ್ರಲ್ ಲೆದರ್ ರಿಸರ್ಚ್ ಇನ್‌ಸ್ಟಿಟ್ಯೂಟ್)
  - ವ್ಯವಸ್ಥಾಪಕ ನಿರ್ದೇಶಕರು (ಡಾ ಬಾಬು ಜಗಜೀವನ್ ರಾಂ ಲೆದರ್ ಇಂಡಸ್ಟ್ರೀಸ್ ಅಭಿವೃದ್ಧಿ ನಿಗಮ)
  - ಜಂಟಿ ನಿರ್ದೇಶಕರು (ತಾಂತ್ರಿಕ ಕೋಶ ವಾಣಿಜ್ಯ ಮತ್ತು ಕೈಗಾರಿಕೆ)
  - ಅಧ್ಯಕ್ಷರು (ಇಂಡಿಯನ್ ಫಿನಿಷ್ಡ್ ಲೆದರ್ ಮ್ಯಾನುಫ್ಯಾಕ್ಚರರ್ಸ್ ಅಂಡ್ ಎಕ್ಸ್ ಪೋರ್ಟರ್ಸ್)
  - ಅಧ್ಯಕ್ಷರು (ಇಂಡಿಯನ್ ಶೂ ಫೆಡರೇಶನ್)
  - ನಿರ್ದೇಶಕರು (ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫ್ಯಾಷನ್ ಟೆಕ್ನಾಲಜಿ)
  - ನಿರ್ದೇಶಕರು (ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ ಟೆಕ್ನಾಲಜಿ)
- ರಾಜ್ಯ ಸರ್ಕಾರವು 2001–02 ರಲ್ಲಿ 10 ಎಕರೆ ಜಮೀನನ್ನು ಉಲ್ಲಾಳು ಉಪನಗರದಲ್ಲಿ ಹಂಚಿಕೆ ಮಾಡಿ ASIDE ಯೋಜನೆಯಡಿ ಧನ ಸಹಾಯ ಮಾಡಿದ್ದು ಕಟ್ಟಡದ ನಿರ್ಮಾಣ ಕಾರ್ಯವನ್ನು KIADB ಯು ನಿರ್ವಹಿಸಿ ಕಟ್ಟಡವನ್ನು ಕಿಲ್ಟ್ ಸಂಸ್ಥೆಗೆ ಹಸ್ತಾಂತರಗೊಳಿಸಿರುತ್ತಾರೆ.
- 2014–15 ನೇ ಸಾಲಿನಲ್ಲಿ ಕಿಲ್ಟ್ ಸಂಸ್ಥೆಯನ್ನು ಕಾಡುಗೊಂಡನಹಳ್ಳಿಯಿಂದ ಉಲ್ಲಾಳು ಉಪನಗರದ ಹೊಸ ಕ್ಯಾಂಪಸ್‌ಗೆ ಸ್ಥಳಾಂತರಿಸಲಾಗಿದೆ.

- ಕಿಲ್ಟ್ ಸಂಸ್ಥೆಯು CLRI GOI, Chennai ರವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಡಿಪ್ಲೋಮ ಇನ್ ಲೆದರ್ ಅಂಡ್ ಫ್ಯಾಷನ್ ಟೆಕ್ನಾಲಜಿ ಕೋರ್ಸ್‌ನ್ನು ಮರುವಿನ್ಯಸಗೊಳಿಸಿದೆ.

- ಕಿಲ್ಟ್ ಸಂಸ್ಥೆಯು ಲೆದರ್ ಅಂಡ್ ಫ್ಯಾಷನ್ ಟೆಕ್ನಾಲಜಿಯ ಡಿಪ್ಲೋಮ ತರಗತಿಗಳನ್ನು ಪ್ರಾರಂಭಿಸಿದ ರಾಷ್ಟ್ರದ ಮೊದಲ ಏಕೈಕ ಸಂಸ್ಥೆಯಾಗಿದೆ. 2015–16 ನೇ ಸಾಲಿನಲ್ಲಿ 45 ವಿದ್ಯಾರ್ಥಿಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ಕೌನ್ಸಿಲಿಂಗ್ ಮೂಲಕ ತೆಗೆದುಕೊಳ್ಳಲು AICTE ಯು ಅನುಮೋದನೆ ಪಡೆದಿದೆ.

- ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಲೆದರ್ ಟೆಕ್ನಾಲಜಿಯು ರಾಜ್ಯದ ಪ್ರಥಮ ಉನ್ನತ ಶಿಕ್ಷಣ ಸಂಸ್ಥೆಯಾಗಿದ್ದು ಚರ್ಮ ತಾಂತ್ರಿಕತೆಯ ಚಟುವಟಿಕೆಗಳನ್ನು ಪ್ರಚಾರ ಪಡಿಸಲು ಅಧಿಕಾರಯುತವಾದ ನಾಯಕತ್ವವನ್ನು ಹೊಂದಿದೆ.

<u>**ಸಂಸ್ಥೆಯ ಮುಖ್ಯದ್ಯೆಯೋದ್ದೇಶಗಳು**</u>

- ಚರ್ಮ ತಾಂತ್ರಿಕತೆಯಲ್ಲಿ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಹಾಗೂ ಕೌಶಲ್ಯ ತರಬೇತಿ ನೀಡಿವುದು.
- ಚರ್ಮ ತಂತ್ರಜ್ಞಾನದಲ್ಲಿ ಉತ್ತಮ ಶಿಕ್ಷಣ ಮತ್ತು ವಿಶೇಷ ತರಬೇತಿ ನೀಡಿವುದು.
- ಅಂತರ್ನಿರ್ಮಿತ ತರಬೇತಿ ನೀಡುವುದು ಮತ್ತು ದೃಷ್ಟಿಕೋನವುಳ್ಳ ತರಬೇತಿ.
- ಸ್ವಂತ ಉದ್ಯೋಗ ಪ್ರಾರಂಭಿಸಲು ಪ್ರೇರಣೆ ನೀಡಿವುದು.
- ಚರ್ಮ ತಾಂತ್ರಿಕತೆ ಬಗ್ಗೆ ಕುಶಲ ಕರ್ಮಿಗಳಿಗೆ, ಚರ್ಮ ಇಂಡಸ್ಟ್ರೀಸ್‌ಗೆ ಸಂಬಂಧಿಸಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
- ಗಣಕೀಕರಣ ಆಧಾರಿತ ಡೇಟಾವನ್ನು ಅಭಿವೃದ್ಧಿಗೊಳಿಸಲು ಅನುಕೂಲ ಮಾಡಿ ಕೊಡುವುದು. (Computer Aided Design-CAD)
- ಚರ್ಮೋದ್ಯಮದ ಉದ್ಯಮಗಳಿಗೆ ಉತ್ಪನ್ನಗಳ ಅಭಿವೃದ್ಧಿ ಮತ್ತು ಆಧುನಿಕರಣ ಯಂತ್ರೋಪಕರಣಗಳ ಬಗ್ಗೆ ಸಹಕಾರ ನೀಡುವುದು.
- ತರಬೇತಿ ಹೊಂದಿದ ವಿದ್ಯಾರ್ಥಿಗಳಿಗೆ ಉದ್ಯೋಗ ಕಲ್ಪಿಸುವುದು.
- ಉತ್ಪಾದಕರು ತಯಾರಿಸಿದ ವಸ್ತುಗಳ ಗುಣಮಟ್ಟ ನಿಯಂತ್ರಣ ಹಾಗು ವಸ್ತುಗಳ ತಪಾಸಣೆ ಮಾಡುವುದು.